ನಿ-72
ಕ್ರಮಸಂಖ್ಯೆ - 150

**ಕರ್ನಾಟಕ ಸರ್ಕಾರ**

ಸಂಖ್ಯೆ: ಎಂಇಡಿ 481 ಎಂಎಂಸಿ 2021

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 23/11/2021

**ಇವರಿಂದ**
ಸರ್ಕಾರದ ಕಾರ್ಯದರ್ಶಿ,
ವೈದ್ಯಕೀಯ ಶಿಕ್ಷಣ ಇಲಾಖೆ

**ಇವರಿಗೆ:**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್,
ವಿಧಾನ ಸೌಧ,

**ಮಾನ್ಯರೆ,**

**ವಿಷಯ** : ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ.ದೇವೇಗೌಡ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

**ಉಲ್ಲೇಖ** : ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಪತ್ರ ಸಂಖ್ಯೆ: ಕವಿಪ/ಪ್ರಶಾ/150/144ನೇಅ/ನಿ-72/2021, ದಿ: 21.09.2021 ಮತ್ತು ಪತ್ರ ಸಂಖ್ಯೆ: ಕವಿಪ:ಪ್ರಶಾ;144ನೇಅ:112ಇಉಕೋ:2021, ದಿ: 28.10.2021

*****

ಪ್ರಸ್ತಾವಿತ ವಿಷಯಕ್ಕೆ ಸಂಬಂದಿಸಿದಂತೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ.ದೇವೇಗೌಡ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸಂಬಂಧಿಸಿದಂತೆ ಉತ್ತರಗಳ 05 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

(ಎಂ. ಜ್ಯೋತಿಪ್ರಕಾಶ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ವೈದ್ಯಕೀಯ ಶಿಕ್ಷಣ ಇಲಾಖೆ

(5)

ನಿಯಮ- 72
ಕ್ರಮಸಂಖ್ಯೆ- 150

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಅ.ದೇವೇಗೌಡ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ವಿಷಯ:** ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸರ್ಜಿಕಲ್ ಅಂಕಾಲಜಿ ವಿಭಾಗವನ್ನು ಆರ್ಥಿಕ ಇಲಾಖೆಯ ಅನುಮೋದನೆಯನ್ನು ಪಡೆದು, ಆರಂಭಿಸಲು ದಿನಾಂಕ: 22.08.2017ರಂದು ಮಾನ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ 24ನೇ ಆಡಳಿತ ಪರಿಷತ್ ಸಭೆಯಲ್ಲಿ ತೀರ್ಮಾನವಾಗಿದ್ದರೂ ಹಾಗೂ ಸದರಿ ವಿಭಾಗದ ಅವಶ್ಯಕತೆ ಇದ್ದರೂ ಇಲ್ಲಿಯವರೆಗೆ ಸದರಿ ಅಂಕಾಲಜಿ ವಿಭಾಗವನ್ನು ಆರಂಭಿಸದೇ ಇರುವ ಬಗ್ಗೆ ಪ್ರಸ್ತಾಪಿಸಲಾಗಿದೆ.

***

ಬಿಎಂಸಿಆರ್‌ಐ ನಲ್ಲಿ ದಿನಾಂಕ: 28.08.2017ರಂದು ನಡೆದ 24ನೇ ಆಡಳಿತ ಪರಿಷತ್ತಿನ ಸಭೆಯ ವಿಷಯಸೂಚಿ 19ರಲ್ಲಿ ಸಂಸ್ಥೆಯಲ್ಲಿ ಸರ್ಜಿಕಲ್ ಅಂಕಾಲಜಿ ವಿಭಾಗವನ್ನು ಹೊಸದಾಗಿ ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಿದ್ದು, "ಸದರಿ ವಿಷಯವನ್ನು ಆಡಳಿತ ಪರಿಷತ್ ಸಮಿತಿಯು ಚರ್ಚಿಸಿ, ಪ್ರಸ್ತುತ ಶಸ್ತ್ರ ಚಿಕಿತ್ಸಾ ಶಾಸ್ತ್ರ ವಿಭಾಗದಲ್ಲಿ ಮಂಜೂರಾಗಿರುವ 22 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಒಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಸರ್ಜಿಕಲ್ ಅಂಕಾಲಜಿ ಹುದ್ದೆಯನ್ನಾಗಿ ಪುನರ್ ಪದನಾಮೀಕರಿಸುವಂತೆ ಹಾಗೂ ಹೊಸದಾಗಿ ಸರ್ಜಿಕಲ್ ಅಂಕಾಲಜಿ ವಿಭಾಗವನ್ನು ಪ್ರಾರಂಭಿಸಲು ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಅನುಮತಿ ಪಡೆಯುವಂತೆ ಆಡಳಿತ ಪರಿಷತ್ ಸಮಿತಿ ಸೂಚಿಸಲು" ನಿರ್ಣಯಿಸಿದೆ.

ಅದರಂತೆ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 378 ಎಂಎಂಸಿ 2017, ದಿನಾಂಕ: 16.01.2018ರಲ್ಲಿ ಶಸ್ತ್ರ ಚಿಕಿತ್ಸಾ ಶಾಸ್ತ್ರ ವಿಭಾಗದಲ್ಲಿರುವ 01 ಸಹಾಯಕ ಪ್ರಾಧ್ಯಾಕರ ಹುದ್ದೆಯನ್ನು, ಈ ಕೆಳಕಂಡ ಷರತ್ತಿಗೊಳಪಟ್ಟು ಸಹಾಯಕ ಪ್ರಾಧ್ಯಾಪಕರು, ಸರ್ಜಿಕಲ್ ಅಂಕಾಲಜಿ ಎಂದು ಮರುಪದನಾಮೀಕರಣ ಮಾಡಲಾಗಿರುತ್ತದೆ.

(1) ಮೇಲ್ಕಂಡಂತೆ ಮರುಪದನಾಮೀಕರಣಗೊಳಿಸಲಾಗಿರುವ ಸಹಾಯಕ ಪ್ರಾಧ್ಯಾಪಕರು, ಸರ್ಜಿಕಲ್ ಅಂಕಾಲಜಿ ವಿಭಾಗ ಈ ಹುದ್ದೆಗೆ ಶಸ್ತ್ರಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಈ ಹಿಂದೆ ಪಾವತಿಸಲಾಗುತ್ತಿದ್ದ ವೇತನ ಭತ್ಯೆಗಳನ್ನು ಮಾತ್ರ ಪಾವತಿಸತಕ್ಕದ್ದು. ಇದನ್ನು ಹೊರತುಪಡಿಸಿ ಈ ಹುದ್ದೆಗೆ ಯಾವುದೇ ಹೆಚ್ಚಿನ ಆರ್ಥಿಕ ಹೊರೆ ಉಂಟಾಗತಕ್ಕದ್ದಲ್ಲ.

(2) ಮೇಲ್ಕಂಡಂತೆ ಮರುಪದನಾಮೀಕರಣಗೊಳಿಸಲಾಗಿರುವ ಶಸ್ತ್ರಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಯನ್ನು ಮತ್ತೊಮ್ಮೆ ಸೃಜಿಸಲು ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಶಸ್ತ್ರ ಚಿಕಿತ್ಸಾ ವಿಭಾಗದಡಿ ಸರ್ಜಿಕಲ್ ಅಂಕಾಲಜಿ ವಿಭಾಗವನ್ನು ಒಳಗೊಂಡಂತೆ ಹೊಸದಾಗಿ ತೆರೆಯಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದ್ದು, ದಿನಾಂಕ: 03.03.2021ರ ಆರ್ಥಿಕ ಇಲಾಖೆಯ ಅಭಿಪ್ರಾಯದಲ್ಲಿ "ಪ್ರಸ್ತುತ ಕಿದ್ವಾಯಿ ಸಂಸ್ಥೆಯಲ್ಲಿ Medical Oncology and Surgical Oncology ಗೆ ಸಂಬಂಧಿಸಿದ ಡಿಪಾರ್ಟ್‌ಮೆಂಟ್‌ಗಳು ಇರುವುದರಿಂದ, ಬಿಎಂಸಿಆರ್‌ಐ ಯಲ್ಲಿ 2 ಯುನಿಟ್ ಸೃಜಿಸುವ ಹಾಗೂ ಅದಕ್ಕೆ 2 ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯನ್ನು ಕೈಬಿಡಲು ತಿಳಿಸಿದೆ."

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಮತ್ತು ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ:ಎಂಇಡಿ 481 ಎಂಎಂಸಿ 2021